2009ನೇ ಸಾಲಿನಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರು ರಾಜ್ಯದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ಕಳುಹಿಸಿರುವ ಕ್ರೋಢೀಕೃತ ಪ್ರಸ್ತಾವನೆಯಲ್ಲಿ ಇದು ಸೇರಿರುತ್ತದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಕ್ರೋಢೀಕೃತ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

This is also included in the consolidated proposal sent by the DG & IGP for sanctioning new police stations at various places in the State during 2009. Consolidated proposal will be considered depending on the availability of funds.

455 ಶ್ರೀ. ಕುಮಾರಸ್ವಾಮಿ ಕೆ.ಜಿ. : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಹಾರನಹಳ್ಳಿ, ಶಿವದುರ್ಗ (ಶಿವಮೊಗ್ಗ ಗ್ರಾಮಾಂತರಗಳಲ್ಲಿ ಪೂರ್ಣಮಟ್ಟದ ಪೊಲೀಸ್ ಠಾಣೆ, ಆನವೇರಿ, ನವುಲೆ (ಶಿವಮೊಗ್ಗ ನಗರ ಹೊರವಲಯ) ಪೊಲೀಸ್ ಔಟ್ ಪೋಸ್ಟ್ ಸ್ಥಾಪನೆಗಾಗಿ ಸಾರ್ವಜನಿಕರು ಅಹವಾಲು ಸಲ್ಲಿಸಿದ್ದು ಈಗಾಗಲೇ ಜಿಲ್ಲಾ ರಕ್ಷಣಾಧಿಕಾರಿಗಳು ಈ ಬಗ್ಗೆ ಗುಣಾತ್ಮಕ ವರದಿ ನೀಡಿದ್ದು ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು; ಯಾವಾಗ ಪ್ರಾರಂಭಿಸಲಾಗುವುದು?

ಆ) ಶಿವಮೊಗ್ಗ ನಗರದಲ್ಲಿ ನಕ್ಸಲೈಟ್ ನಿಗ್ರಹ ತರಬೇತಿ ಸಂಸ್ಥೆ ಪ್ರಾರಂಭಿಸಲಾಗುವುದೇ?

ಇ) ಈ ತರಬೇತಿ ಸಂಸ್ಥೆಗೆ ಭೂ ಸುಧಾರಣೆ ಕಾಯ್ದೆ 79 ಎ.ಬಿ. ಯಡಿ ವಶಪಡಿಸಿಕೊಂಡ ಗುಡ್ಡದ ಅರೆಕೆರೆ ಜಮೀನನ್ನು ನೀಡಲಾಗುವುದೇ?

ಈ) ಹಾಗಿಲ್ಲದಿದ್ದಲ್ಲಿ ಯಾವ ಗ್ರಾಮದ ಸರ್ಕಾರಿ ಜಮೀನಿನಲ್ಲಿ ಈ ತರಬೇತಿ ಶಾಲೆ ಪ್ರಾರಂಭಿಸಲು ಯೋಚಿಸಲಾಗಿದೆ; (ವಿವರ ನೀಡುವುದು)?

ಶ್ರೀ ಡಾ:ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಹಾರನಹಳ್ಳಿ, ಶಿವದುರ್ಗ (ಶಿವಮೊಗ್ಗ ಗ್ರಾಮಾಂತರ)ಗಳಲ್ಲಿ ಪೂರ್ಣಮಟ್ಟದ ಪೊಲೀಸ್ ಠಾಣೆ ಹಾಗೂ ಅನವೇರಿ, ನವುಲೆ (ಶಿವಮೊಗ್ಗ ನಗರ ಹೊರವಲಯ) ಪೊಲೀಸ್ ಹೊರಠಾಣೆಯನ್ನು ಸ್ಥಾಪಿಸುವ ಯಾವುದೇ ಪ್ರಸ್ತಾವನೆಯು ಇಲಾಖೆಯ ಮುಂದಿರುವುದಿಲ್ಲ.

There is no proposal under examination before the Department, for the creation of full-fledged Police Station at

Haranahalli, Shivadurga (Shimoga Rural) of Shimoga Rural Legislative Assembly Constituency and Police Outpost at Anaveri and Navule. (Shimoga City outer zone).

ಆ) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/199/ಪಿಒಪಿ/2008, ದಿನಾಂಕ: 21–3–2009 ರಲ್ಲಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರದಲ್ಲಿ ನಕ್ಸಲ್ ನಿಗ್ರಹ ತರಬೇತಿ ಅಕಾಡೆಮಿಯನ್ನು ಒಟ್ಟು 120 ಹುದ್ದೆಗಳೊಂದಿಗೆ ಸ್ಥಾಪಿಸಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ,

Govt. has accorded sanction for the establishmenet of Anti Naxal Training Academy at Shikaripura, Shimoga district, along with 120 posts, vide G.O.No:HD/199/POP/2008, dtd: 21-3-2009.

ಇ) ಮತ್ತು ಈ)

ಶಿವಮೊಗ್ಗದಲ್ಲಿ ನಕ್ಸಲ್ ನಿಗ್ರಹ ತರಬೇತಿ ಅಕಾಡೆಮಿಯನ್ನು ಸ್ಥಾಪಿಸಲು 100 ಎಕರೆ ಭೂಮಿಯನ್ನು ಪೊಲೀಸ್ ಇಲಾಖೆಗೆ ಮಂಜೂರು ಮಾಡಲು ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರನ್ನು ಕೋರಲಾಗಿದ್ದು, ಎಲ್ಲಿ ಜಮೀನು ಮಂಜೂರಾಗುತ್ತದೆ ಎಂಬುದು ತಿಳಿದಿಲ್ಲ.

Deputy Commissioner, Shimoga, has been requested for grant of 100 acres of land to the Police Department for the establishment of Anti Naxal Academy at Shimoga, and it is not known where the land will be granted.

544 ಶ್ರೀ ಮಂಜು.ಎ (ಅರಕಲಗೂಡು) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳಿಗೆ ಎಷ್ಟು ಎಸ್‌ಎಫ್‌ಸಿ ಹಣವನ್ನು ನೀಡಲಾಗಿದೆ. (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಅರಕಲಗೂಡು ಪಟ್ಟಣ ಪಂಚಾಯ್ತಿಗೆ ಅನುದಾನವನ್ನು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಯಾವ ಕಾರಣಕ್ಕಾಗಿ ಅನುದಾನವನ್ನು ಕಡಿತಗೊಳಿಸಲಾಗಿದೆ?